ಗೊತ್ತು ಅಣ್ಣಾ. ಆಪ್ರಿಷಿಯೇಟ್ ದಟ್. ಆದರೆ, ಅವರ ಸಮಸ್ಯೆ ನನ್ನ ನಿರ್ಣಯದೊಂದಿಗೆ. ನನ್ನನ್ನು ಹೇಳಲು ಬಿಡು'. ತಂಗಿಯ ಮೇಲಿನ ಪ್ರೀತಿಯಿಂದಲಾದರೂ ತಾನೇನು ತಪ್ಪುಮಾಡಿರುವೆನೆಂದು ಅರ್ಥವಾಗಿ, 'ಸಾರಿ' ಹೇಳಿದ.

'ಎಲ್ಲೋ ಆಗುತ್ತಿರುವ ರೇಪುಗಳನ್ನು ಕುರಿತು ನಿಮಗೆ ನೋವುಂಟಾಗುತ್ತದೆ. ಆವೇಶವನ್ನು ತಂದುಕೊಳ್ಳುತ್ತೀರಿ. ನಿಮ್ಮ ಮಗಳಿಗೆ ಅನ್ಯಾಯವಾದರೆ ಮಾತ್ರ ಮರೆತು ಬಿಡಬೇಕೆಂದು ಸಲಹೆ ಕೊಡುತ್ತಿದ್ದೀರಿ. ರೇಪ್ ವಿಷಯ ಹೊರಬಂದರೆ ಮದುವೆ ಆಗುವುದಿಲ್ಲವೆಂದು ಹೆದರಿಕೆ. ಅಷ್ಟೇ ಅಲ್ಲವೇ?' ಸಿಟ್ಟಿನೊಂದಿಗೆ ಶ್ರಿಯಾಳ ಗಂಟಲಲ್ಲಿ ಅಳು ಕೂಡ.

'ಸಾರಿ ಶ್ರಿಯಾ, ಇದರಿಂದಾಗಿ ನಿನ್ನ ಜೀವನ ಹಾಳಾಗುವುದನ್ನು ನಮಗೆ ನೋಡಲಾಗುವುದಿಲ್ಲ, ಸಹಿಸಲಾರೆವು. ಅರ್ಥಮಾಡಿಕೋ. ನೀನಿನ್ನೂ ಸಣ್ಣಮಗು. ನಮ್ಮ ಮಾತನ್ನು ಕೇಳು. ಪ್ಲೀಜ್' ಅಸಹಾಯಕಳಾಗಿ ಕೈ ಮುಗಿದಳು ಮಾಲತಿ.

'ಈ ನೋವು ಹೋಗುವುದಕ್ಕೂ ಮತ್ತೇನಾದರೂ ಪಿಲ್ ಇದ್ದರೇ ಒಳ್ಳೆದಿತ್ತು' ಶ್ರಿಯಾ ಗಂಟಲಲ್ಲಿ ನೋವು. ಮಾಲತಿಯ ಕಣ್ಣಲ್ಲಿ ನೀರು.

'ಕೋರ್ಟ್ ಅಂದರೆ ಈಗಾಗಲೇ ಪೂರ್ತಿಯಾಗುವುದಿಲ್ಲ ತಾಯೀ, ಸೆಟಲ್ಮೆಂಟ್ ಮಾಡಿಕೊಳ್ಳಬೇಕೆಂದು ಹೇಳುವುದು ಅದಕ್ಕಾಗಿಯೇ, ನೀನು ನನ್ನ ಚಿನ್ನದಗೊಂಬೆ ಅಲ್ಲವೇ. ನಮ್ಮಮಾತು ಕೇಳು ತಾಯಿ' ಪಕ್ಕದಲ್ಲಿ ಕುಳಿತು ಪ್ರೀತಿಯಿಂದ ಗೋಗರೆದ ಪ್ರಸಾದ್.

'ಎಲ್ಲರೂ ನಿಮ್ಮಹಾಗೆ ಹೇಳುವುದರಿಂದಲೇ, ಸೆಟಲ್ಮೆಂಟ್ ಮಾಡಿಕೊಂಡವರೇ ಹೆಚ್ಚಾಗಿದ್ದಾರೆ ಡ್ಯಾಡ್. ಈ ಒಂದು ತಿಂಗಳಲ್ಲಿ ಸ್ಟಾಟಿಸ್ಟಿಕ್ಸ್ ಕುರಿತಾಗಿ ಬಹಳಷ್ಟು ತಿಳಿದುಕೊಂಡಿದ್ದೇನೆ. ಆದರೆ, ಆ ಹುಡುಗಿಯರು ಜೀವನದುದ್ದಕ್ಕೂ ಎಂಥಾ ನೋವನ್ನು ಅನುಭವಿಸುತ್ತಿರುವರೆಂದು ತಿಳಿದುಹೇಳುವ ಸ್ಟಾಟಿಸ್ಟಿಕ್ಸ್ ಎಲ್ಲೂ ಕಾಣುವುದಿಲ್ಲ. ಆ ಜಡ್ಜ್ ಮೇಲೆ ಕೇಸ್ ಹಾಕುವುದಕ್ಕಾಗಿ ಕ್ರಿಸ್ಟಿನಾಗೆ ಇಪ್ಪತ್ತು, ಮೂವತ್ತು ವರ್ಷಗಳು ಹಿಡಿಯಿತು. ಈ ಇಪ್ಪತ್ತೈದು ವರ್ಷದಲ್ಲಿ ಅವಳು ಅನುಭವಿಸಿದ ನೋವನ್ನು ಯಾವ ಕೋರ್ಟ್, ಯಾವ ಸೆಟಲ್ಮೆಂಟ್ ಹೇಳಬಲ್ಲದು?' ಶ್ರಿಯಾಳ ಮಾತಿನಲ್ಲಿ ವೇದನೆ, ಆಗ್ರಹ, ಆಕ್ರೋಶ ಎಲ್ಲವೂ ಕಲಬೆರಕೆಯಾಗಿ ಹೋದವು.

'ಕೇಸ್ ಹಾಕಿದರೆ ಏನಾಗುತ್ತದೆಯೋ, ಇಲ್ಲಿರುವ ಮಾಧ್ಯಮಗಳು ಹೇಗೆ ನಡೆದುಕೊಳ್ಳುತ್ತವೆಯೋ, ಚರ್ಚೆಗಳನ್ನು ಮಾಡುತ್ತವೆಯೋ, ಎಂತಹ ಚರ್ಚೆಗಳು ಮಾಡುತ್ತವೊ ನಿನಗೇ ಚೆನ್ನಾಗಿ ತಿಳಿದಿದೆ. ನಿನ್ನ ಕ್ಯಾರೆಕ್ಟರ್ ಬಗ್ಗೆ, ನಿನ್ನ ಸ್ನೇಹಿತರ ಬಗ್ಗೆ ಕಾಮೆಂಟ್‌ಗಳನ್ನು ಮಾಡುತ್ತಾರೆ. ಆ ದಿನ ನೀನು ಪಾರ್ಟಿಯಲ್ಲಿ ತೆಗೆದುಕೊಂಡಿರುವ ಫೋಟೊಗಳು ಹೊರಬರುತ್ತವೆ. ಆ ದಿನ ನೀನು ತೊಟ್ಟ ಬಟ್ಟೆಗಳೂ ಸೇರಿದಂತೆ. ಇದು ನಿನ್ನ ಅನುಮತಿಯ ಮೇರೆಗೆ ನಡೆದಿದೆ ಎಂದು, ಅದು ರೇಪ್ ಅಲ್ಲವೆಂದು ವಾದಿಸುತ್ತಾರೆ. ನಿನಗೆ ಸಾಕ್ಷ್ಯ ಹೇಳಲು ಯಾರೂ ಬರುವುದಿಲ್ಲ' ಪ್ರಸಾದ್ ದನಿಯಲ್ಲಿ ನೋವಿಗಿಂತ ಸಿಟ್ಟು, ಮಗಳನ್ನು ಒಪ್ಪಿಸಬೇಕೆಂಬ ತಾಪತ್ರಯ ಕಾಣುತ್ತದೆ.

'ಫೋಟೊ ತೆಗೆದುಕೊಂಡರೆ, ಷಾರ್ಟ್ಸ್ ಮತ್ತು ಸ್ಕರ್ಟ್ ಧರಿಸಿದರೆ, ಯಾರಾದರೂ ನಮ್ಮ ಮೇಲೆ ಅತ್ಯಾಚಾರ ಮಾಡಬಹುದೇ?' ವಾದಕ್ಕಿಳಿದಳು ಶ್ರಿಯಾ.

'ಹೀಗೆ ನಾವು ಎಷ್ಟು ಹೊತ್ತಾದರೂ ವಾದಿಸಿಕೊಳ್ಳಬಹುದು ಶ್ರಿಯಾ. ಏನೂ ಜರುಗುವುದಿಲ್ಲ. ಏನೂ ಆಗುವುದಿಲ್ಲ. ಫೈನಲ್ ಆಗಿ ಹೇಳುತ್ತಿದ್ದೇನೆ. ಕಾಲೇಜಿನ ಮೇಲೆ sue ಮಾಡುವುದೇ ನಿನ್ನ ನಿರ್ಧಾರವಾಗಿದ್ದರೆ, ನಾವು ನಿನ್ನನ್ನು ಸಪೋರ್ಟ್ ಮಾಡುವುದು ಸಾಧ್ಯವಿಲ್ಲ. ಸಾರೀ, You are on your own. You can do whatever you want'. ಕೊನೆಯ ಅಸ್ತ್ರವನ್ನು ಪ್ರಯೋಗಿಸಿದನು ಪ್ರಸಾದ್. ಅವನ ಗಂಟಲಿನಲ್ಲಿದ್ದ ಬಿರುಮಾತಿನ ಚಾಕು ನೇರವಾಗಿ ಮಾಲತಿ ಎದೆಯಲ್ಲಿ ಇಳಿಯಿತು.

'ನಾನು ಸಪೋರ್ಟ್ ಮಾಡುತ್ತೇನೆ ಶ್ರಿಯಾ' ಎಂದ ಸಂದೀಪ್.

'ನಾನು ಕೂಡಾ' ಎಂದಳು ಮಾಲತಿ.

ಹೆಂಡತಿ, ಮಗನ ಮಾತುಗಳನ್ನು ನಂಬಲಾರದಂತೆ ನೋಡುತ್ತಾ ಬಿರಬಿರನೆ ಹೊರಟು ಹೋದ ಪ್ರಸಾದ್.

ಹೊರಟು ಹೋಗುತ್ತಿರುವ ತಂದೆಯ ಕಡೆಗೆ ನೋವಿನಿಂದ ನೋಡಿದಳು ಶ್ರಿಯಾ.

ಕಣ್ಣಲ್ಲಿ ಸಣ್ಣನೆಯ ನೀರಿನ ಪೊರೆ.

●